Rotary

# JASMINE

ಜಾಸ್ಮಿನ್ | जास्मिन

UNITE FOR GOOD

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



Rtn. Francesco Arezzo
RI President



Rtn. Palaksha K.
Dist. Governor



Rtn. PHF. I. Narayana
Asst. Governor



Rtn. Koushik Yadiyal
Zonal Lieutenant



40h year of Service and Fellowship

Volume 40 Issue - 33 19th February 2026

## Interaction

with

**Rtn. Kshitil Uthna,**

President,
Trandem Rotary Club, Norway

Time : 7.00 p.m.
Venue : Hotel Shivaprasad Grand, Kundapura



Rtn. Sachin Nackathaya
President



Rtn. Gerald Crasto
Secretary



Rtn. Ramananda Karanth
Bulletin Editor

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura

## ಸಂಪಾದಕೀಯ :



ನನ್ನೊಲವಿನ ರೋಟರಿ ಮಿತ್ರರೇ,

ಇಂದು ಭಾರವಾದ ಹೃದಯದಿಂದ ಸಂಪಾದಕೀಯ ಬರೆಯುತ್ತಿದ್ದೇನೆ. ನಮ್ಮ ರೋಟರಿಗೆ ಹಲವುಬಾರಿ ಸಂಪನ್ಮೂಲ ವ್ಯಕ್ತಿಯಾಗಿ ಹಲವಾರು ಕಾರ್ಯಕ್ರಮಗಳಿಗೆ ಆಗಮಿಸಿ ತಮ್ಮ ಅಮೂಲ್ಯ ಜ್ಞಾನವನ್ನು ನಮ್ಮೊಡನೆ ಹಂಚಿಕೊಂಡ ನಮ್ಮ ಚಿಕ್ಕಪ್ಪ ಅಂದರೆ ಕೊ. ಶಿವಾನಂದ ಕಾರಂತ್ ತಾ॥11/02/2026 ಬುಧವಾರದಂದು ನಿಧನರಾದರು. ಶ್ರೀ ಜಗದ್ಗುರು ವಿದ್ಯಾರಣ್ಯರು ಹೇಳಿದಂತೆ "ವ್ಯಕ್ತಿ ಅಲ್ಪಾಯು ಆದರೆ ತತ್ವ ಚಿರಾಯು" ಅದರಂತೆ ಅವರು ಕ್ಲಾಸಿನಲ್ಲಿ ಭೋದಿಸಿದ ವಿಚಾರಗಳು, ಅವರ ಪಾಠ ಮಾಡುವ ಶೈಲಿ, ಅವರ ಲೇಖನಗಳು, ಅವರ ಸಾಹಿತ್ಯ ಕೃಷಿ ಅವರ ಮಧುರ ಸ್ನೇಹ ಭಾಂದವ್ಯ ಇಂದಿಗೂ ಮುಂದೆಂದೂ ಅಜರಾಮರ. ಅವರ ಕಂಚಿನ ಕಂಠದ ಭಾಷಣದ ಪದಗಳು ಇಂದೂ ನನ್ನ ಕಿವಿಯಲ್ಲಿ ಅನುಋಣಿಸುತ್ತಿದೆ. ವಿದ್ಯೆ ಕಲಿಸಿದ ಗುರುಗಳನ್ನು ಸದಾ ಗೌರವಿಸುವ ಹಾಗೂ ಪ್ರೀತಿ ತೋರಿಸುವ ನಾಡು ಈ ರಾಜ್ಯದಲ್ಲಿದ್ದರೆ ಅದು ಗಂಗೊಳ್ಳಿ. ವಿದ್ಯೆ ಕಲಿಸಿದ ಗುರುಗಳನ್ನು ಮರೆಯದೇ ಪೂಜ್ಯ ಭಾವನೆಯಿಂದ ನೋಡುವ ಶಾಲೆ ಕಾಲೇಜಿದ್ದರೆ ಅದು ಎಸ್.ವಿ. ಕಾಲೇಜು ಗಂಗೊಳ್ಳಿ. ಅವರು ನಿರ್ದೇಶಿಸಿದ ನಾಟಕಗಳು ಆ ಪಾತ್ರದ ಪಾತ್ರಧಾರಿಗಳು ಇಂದೂ ಸಹ ನನ್ನೊಡನೆ ಆ ಸಂಭಾಷಣೆಗಳನ್ನು ಹಂಚಿಕೊಂಡಿರುವುದು ಹಾಗೂ ತಮ್ಮ ಜೀವನದಲ್ಲಿ ಅವರ ಭೋದನೆಗಳನ್ನು ಆಳವಾಗಿ ಅಳವಡಿಸಿಕೊಂಡಿರುವುದು ನೋಡಿದರೆ ಅದೆಷ್ಟು ಪ್ರಭಾವವನ್ನು ಇವರು ತನ್ನ ಶಿಷ್ಯರ ಬದುಕಿನಲ್ಲಿ ಬೀರಿದ್ದರು ಎಂಬ ವಿಚಾರ ನನ್ನ ವಿಸ್ಮಯಗೊಳಿಸಿತು. ಅವರ ಪಾದ ಪದ್ಮಕ್ಕೆ ನನ್ನ ಭಾಷ್ಪಾಂಜಲಿಯನ್ನು ಅರ್ಪಿಸುತ್ತೇನೆ. ರೋಟರಿಯ ಶತಾಬ್ದಿಯ ವರುಷದಲ್ಲಿ ನಮ್ಮ ಗಂಗೊಳ್ಳಿ ರೋಟರಿಯ ಅಧ್ಯಕ್ಷರು ಕೊ. ಶಿವಾನಂದ ಕಾರಂತರು ಎಂಬುದು ನನಗೆ ಮತ್ತೊಂದು ಹೆಮ್ಮೆಯ ವಿಚಾರ. ಸದಾ ಇವರ ಪ್ರಿಯ ಶಿಷ್ಯರಾಗಿ ಕಾರಂತರನ್ನು ಸಾಹಿತ್ಯ ಸಮ್ಮೇಳನ ಅಧ್ಯಕ್ಷರನ್ನಾಗಿಸಿ ತಮ್ಮ ಗುರುದಕ್ಷಿಣೆ ಸಲ್ಲಿಸಿದ ರೊ. ಯು.ಎಸ್. ಶೆಣೈ ಹಾಗೂ ರೊ. ಡಾ॥ ಉಮೇಶ್ ಪುತ್ರನ್ ಅವರಿಗೆ ನನ್ನ ಹೃದಯಾಂತರಾಳದ ನಮನಗಳನ್ನು ಸಲ್ಲಿಸುತ್ತೇನೆ.

**– ರೊ. ರಮಾನಂದ ಕಾರಂತ**

## ವಾರದ ಸಭೆಯ ವರದಿ




ಕಳೆದ ವಾರದ ಸಾಮಾನ್ಯ ಸಭೆಯಲ್ಲಿ ಕಾರ್ಯದರ್ಶಿ ರೊ. ಜೆರಾಲ್ಡ್ ಕ್ರಾಸರ ಅನುಪಸ್ಥಿತಿಯಲ್ಲಿ ರೊ. ಸತ್ಯನಾರಾಯಣ ಪುರಾಣಿಕ ಹಂಗಾಮಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದರು. ಅಧ್ಯಕ್ಷ ರೊ. ಸಚಿನ್ ನಕ್ಕತ್ತಾಯರಿಗೆ ರೊ. ಶ್ರೀನಿವಾಸ ಶೇಟ್ ಕೊರಳ ಪಟ್ಟಿ ತೊಡಿಸಿದರು. ಅಧ್ಯಕ್ಷರು ಸಭೆಯನ್ನು ವಿದ್ಯುಕ್ತವಾಗಿ ಪ್ರಾರಂಭಿಸಿ, ಆಗಮಿಸಿದ ರೋಟರಿ ಮಿತ್ರರನ್ನು ಸ್ವಾಗತಿಸಿದರು. ರೊ. ಶ್ರೀನಿವಾಸ ಶೇಟರ ಸುಶ್ರಾವ್ಯ ದೇವರ ನಾಮ, ಕಾರ್ಯದರ್ಶಿಯ ವರದಿ ನಂತರ ರೊ. ಸೀತಾರಾಮ ನಕ್ಕತ್ತಾಯ ವಾರದ ಚಿಂತನೆ, ರೊ. ವಾಸುದೇವ ಕಾರಂತ ರೋಟರಿ ಮಾಹಿತಿ ನೀಡಿದರು. ಇತ್ತೀಚೆಗೆ ಅಗಲಿದ ಬಸ್ರೂರು ಅಪ್ಪಣ್ಣ ಹೆಗ್ಡೆ, ಕೋಣಿ ಶಿವಾನಂದ ಕಾರಂತರಿಗೆ ರೊ. ಯು. ಎಸ್. ಶೆಣೈ ಅವರ ಜೀವನ, ಕೊಡುಗೆ ಬಗ್ಗೆ ತಿಳಿಸಿ ನುಡಿನಮನ ಸಲ್ಲಿಸಿದರು. ಅಂದು ಹುಟ್ಟುಹಬ್ಬ ಆಚರಿಸಿಕೊಂಡ ರೊ. ಪ್ರಕಾಶ್ ಶೆಟ್ಟಿ ಮಗನ ಜೊತೆ ಕೇಕ್ ಕತ್ತರಿಸಿ ಎಲ್ಲರಿಗೂ ಹಂಚಿದರು ಮತ್ತು ಕೊನೆಯ ಹಾಸ್ಯದೊಂದಿಗೆ ಎಲ್ಲರನ್ನು ನಗಿಸಿದರು. ಅದೃಷ್ಟವಂತ ವ್ಯಕ್ತಿಯಾಗಿ ರೋಟರಿಯನ್ ಪ್ರಕಾಶ್ ಶೆಟ್ಟಿಯವರ ಮಗನಿಗೆ ಕೊಡುಗೆ ಹಸ್ತಾಂತರಿಸಲಾಯಿತು. ರೊ. ಸುಮಾ ಪುತ್ರನ್ ಧನ್ಯವಾದ ಸಮರ್ಪಿಸಿದರು. ರಾಷ್ಟ್ರಗೀತೆಯ ನಂತರ ಅಧ್ಯಕ್ಷರು ಸಭೆಯನ್ನು ಮುಂದೂಡಿದರು.

## ಶಂಕರಾಚಾರ್ಯರ ವಿವೇಕ ಚೂಡಾಮಣಿಗೆ ಸ್ವಾಮಿ ರಂಗನಾಥಾನಂದರ ದೃಷ್ಟಾಂತಗಳು--122

### ಆತ್ಮವು ಅಹಮಿಕೆಗಿಂತಲೂ ಭಿನ್ನವಾದುದು

ಸಾಮಾನ್ಯವಾಗಿ ಎಲ್ಲರಲ್ಲೂ ತಮಸ್ಸು ಮತ್ತು ರಜಸ್ಸುಗಳ ಪ್ರಾಬಲ್ಯವನ್ನು ನಾವು ಕಾಣುತ್ತೇವೆ. ಇದು ಬದುಕುಳಿಯುವ ಅಥವಾ ಅಸ್ತಿತ್ವದ ದೃಷ್ಟಿಯಿಂದ ಕಾರ್ಯನಿರ್ವಹಿಸುವ ಮನುಷ್ಯರ ಸಾಮಾನ್ಯ ಮಟ್ಟ. ಆದರೆ ನಮ್ಮಲ್ಲಿ ಯಾವಾಗ ಅಧ್ಯಾತ್ಮ ವಿಕಸನವಾಗುತ್ತದೋ ಆಗ ಗುಣಗಳ ಅನುಪಾತದಲ್ಲಿ ಬದಲಾವಣೆಯಾಗುತ್ತದೆ. ಸತ್ತ್ವದ ಅಂಶ ಗಣನೀಯವಾಗಿ ವೃದ್ಧಿಹೊಂದಿ, ರಜಸ್ಸು ಮತ್ತು ತಮಸ್ಸು ಕ್ಷಯಿಸ ತೊಡಗುತ್ತವೆ. ಸತ್ತ್ವವೇ ತುಂಬಿರುವ ಮನುಷ್ಯರಲ್ಲಿ ಉನ್ನತ ವ್ಯಕ್ತಿತ್ವ ಕಂಡುಬರುತ್ತದೆ. ಸತ್ತ್ವವು ಪ್ರಕಾಶ ಮಾನ, ರಜಸ್ಸು ಕುರುಡುತನ ತುಂಬಿದ ಚಟುವಟಿಕೆ, ತಮಸ್ಸು ಕತ್ತಲು ಮತ್ತು ಜಡತೆಯನ್ನು ಸೂಚಿಸುತ್ತವೆ. ನಮ್ಮ ಮುಂದಿರುವ ಕರ್ತವ್ಯ ವೆಂದರೆ ಗುಣಗಳ ಅನುಪಾತವನ್ನು ಬದಲಿಸಿ ಸತ್ವದ ವೃದ್ಧಿ ಹಾಗೂ ಇತರ ಗುಣಗಳ ಇಳಿಕೆಯ ಬಗ್ಗೆ ಗಮನಹರಿಸುವುದು. ಸರಿಯಾದ ಶಿಕ್ಷಣ ಕ್ರಮದ ಮೂಲಕ ಒಬ್ಬ ಆಲಸಿ, ಜಡತೆಯಿಂದ ಕೂಡಿದ ಮನುಷ್ಯನನ್ನು ಕ್ರಿಯಾತ್ಮಕ ಹಾಗೂ ಮಹತ್ವಾಕಾಂಕ್ಷಿಯನ್ನಾಗಿಸಬೇಕು, ಕ್ರಿಯಾತ್ಮಕ ವ್ಯಕ್ತಿಯ ಸಾಮರ್ಥ್ಯವನ್ನು ಸಂಸ್ಕರಿಸಿ ಸಂಯಮ ಹಾಗೂ ಇತರ ಶಿಸ್ತುಗಳ ಸಹಾಯದಿಂದ ಪ್ರಕಾಶ ಗೊಳಿಸಬೇಕು. ಹೀಗೆ ಎಂತಹ ಬೆಳವಣಿಗೆಯನ್ನು ನಾವು ತರಬಹುದು! ಇದು ತಮಸ್ಸಿನಿಂದ ರಜಸ್ಸು, ರಜಸ್ಸಿನಿಂದ ಸತ್ತ್ವದೆಡೆಗೆ ಆಗುವ ಪ್ರಜ್ಞಾಪೂರ್ವಕ ಪರಿವರ್ತನೆ. ಈ ಪರಿವರ್ತನೆಗಳು ವೈಯಕ್ತಿಕವಾಗಿ ಹಾಗೂ ಸಾಮೂಹಿಕವಾಗಿ ನಡೆಯಬೇಕಿದೆ.

ನಾವು ಸ್ವತಂತ್ರ ಪೂರ್ವ ಮತ್ತು ನಂತರದ ಭಾರತದ ರಾಜಕೀಯ ಬೆಳವಣಿಗೆಯ ಅಧ್ಯಯನ ಮಾಡಿದರೆ, ಪ್ರಾರಂಭದಲ್ಲಿ ಆಲಸ್ಯದಿಂದ ನಿದ್ರಾಸ್ಥಿತಿಯಲ್ಲಿದ್ದ ರಾಜಕೀಯಶಕ್ತಿ ಕಂಡುಬರುತ್ತದೆ. ಹತ್ತೊಂಬತ್ತನೆಯ ಶತಮಾನದ ರಾಜಕೀಯ ಸ್ಥಿತಿಯನ್ನು ಜರ್ಮನಿಯ ಕವಿಯೊಬ್ಬನ ಪದಗಳಿಗೆ ಹೋಲಿಸಬಹುದಾದ ಒಂದೇ ಒಂದು ತತ್ವ ಇತ್ತು, "ನಿದ್ರೆಯು ಮಧುರ, ಸಾವು ಇನ್ನೂ ಉತ್ತಮ, ಜನಿಸದೇ ಇರುವುದು ಅತ್ಯುತ್ತಮ". ವರ್ತಮಾನದಲ್ಲಿ, ನಮ್ಮ ರಾಜಕೀಯ ಶಕ್ತಿಯು ಕಚ್ಚಾಸ್ಥಿತಿಯಲ್ಲಿದ್ದರೂ ಕ್ರಿಯಾಶೀಲತೆಯನ್ನು ಹೊಂದಿದೆ. ಈಗ ರಾಜಕೀಯದಲ್ಲಿ ರಜೋಗುಣ ಹೆಚ್ಚಾಗಿ ಹಿಂಸೆ, ದುರ್ನಡತೆಗಳಿಗೆ ಕಾರಣವಾಗಿದೆ. ಆದರೆ ಈ ಶಕ್ತಿಯಲ್ಲಿ ಯಾವುದೇ ಪ್ರಕಾಶವೂ ಇಲ್ಲದಿರುವುದರಿಂದ ತಾನೇತಾನಾಗಿ ನಾಶವಾಗುತ್ತದೆ. ಆದರೆ ಯಾವಾಗ ಈ ಶಕ್ತಿಯು ಸಾತ್ವಿಕ ಶಕ್ತಿಯಾಗಿ ಪರಿವರ್ತನೆಯಾಗುತ್ತದೆಯೋ ಆಗ ಎಲ್ಲವೂ ಬದಲಾಗುತ್ತದೆ. ಆಗ ಶಕ್ತಿಯು ಉನ್ನತಮಟ್ಟದ ಶಿಸ್ತು, ಪ್ರಕಾಶಗಳಿಂದ ಕೂಡಿದ್ದು, ಧನಾತ್ಮಕ, ಕ್ರಿಯಾಶೀಲ ವ್ಯಕ್ತಿ ವಿಕಸನಕ್ಕೆ ನಾಂದಿ ಯಾಗುತ್ತದೆ. ಎಂದು ನಮ್ಮ ಜನರ ಜೀವನ ದಲ್ಲಿ ಒಂದು ಸಣ್ಣ ಪ್ರಮಾಣದಲ್ಲಿಯಾದರೂ ಸಾತ್ವಿಕ ಶಕ್ತಿಯ ಪ್ರವೇಶವಾಗುತ್ತದೆಯೋ ಅಂದೇ ಭಾರತದ ಸುದಿನ. ತ್ಯಾಗ, ಕರುಣೆ ಎಂಬ ಉನ್ನತ ಗುಣಗಳು ಎಲ್ಲ ಪ್ರಜೆಗಳಲ್ಲಿಯೂ ಬಂದು ಉನ್ನತ ಕಾರ್ಯಗಳು ಆಗಲು ಸಾಧ್ಯವಾಗುತ್ತದೆ. ಈ ಪರಿವರ್ತನೆಯಾಗಲು ಮಾನವನ ಆಳವಾದ ಅಧ್ಯಯನದ ಅರಿವಿನ ಅವಶ್ಯವಿದೆ. ನಮಗೆ ಪಂಚವಾರ್ಷಿಕ ಯೋಜನೆಗಳಿಗಿಂತಲೂ, ಅವುಗಳನ್ನು ಕಾರ್ಯಗತಗೊಳಿಸುವ ಮಾನವ ಸಂಪನ್ಮೂಲದ ಅವಶ್ಯವಿದೆ.

ದೇಹ, ಇಂದ್ರಿಯಗಳು ಮತ್ತು ಅಹಂ ಇವುಗಳ ಸಂಕೀರ್ಣವು ಕಾರ್ಯ ನಿರ್ವಹಿಸಲು ಬೇಕಾದ ಆತ್ಮ ಜ್ಯೋತಿ ಯನ್ನು ನಾವು ಅರಸಬೇಕು. ಈಗ ಅಹಮಿಕೆಯು ಭೌತಿಕ ಮತ್ತು ಇಂದ್ರಿಯ ವ್ಯವಸ್ಥೆ ಗಳ ಬಾಲಂಗೋಚಿಯಂತೆ ಕಾರ್ಯ ನಿರ್ವಹಿಸುತ್ತಿದೆ. ಅನುಭವಗಳು ಯಾವ ರೀತಿಯವೋ ಅದೂ ತನ್ನನ್ನು ಹಾಗೇ ತಿಳಿದುಕೊಳ್ಳುತ್ತದೆ ಆದರೆ ಈ ಯಾವ ಅನುಭವಗಳೂ ಆತ್ಮನಿಗೆ ಸಂಬಂಧಿಸಿದವಲ್ಲ. ಮುಂದೆ ಇದರ ಬಗ್ಗೆ ನೋಡೋಣ.

ಸದಾಶಿವ ಸಮಾರಂಭಾಮ್ ಶಂಕರಾಚಾರ್ಯ ಮಧ್ಯಮಾಮ್। ಅಸ್ಮದಾಚಾರ್ಯ ಪರ್ಯಂತಾಮ್ ವಂದೇ ಗುರುಪರಂಪರಾಮ್॥

ಶ್ರೀ ಗುರುಚರಣಾರವಿಂದಾರ್ಪಣಮಸ್ತು... ಮುಂದುವರಿಯುವುದು.....

---

**ರೋಟರಿ ಮಾಹಿತಿ**

### ರೋಟರಿ ಇಂಟರ್‌ನ್ಯಾಶನಲ್‌ನ ಮಹಾಕಾರ್ಯದರ್ಶಿ

ರೋಟರಿ ಇಂಟರ್‌ನ್ಯಾಶನಲ್‌ನ ದೈನಿಕ ಆಡಳಿತವು ರೋಟರಿಯ ಅತ್ಯುನ್ನತ ವೃತ್ತಿಪರ ಕಾರ್ಯದರ್ಶಿಯಾಗಿರುವ ಮಹಾಕಾರ್ಯದರ್ಶಿಯವರ ಉಸ್ತುವಾರಿಯಲ್ಲಿ ನಡೆಯುತ್ತದೆ. ಮಹಾಕಾರ್ಯದರ್ಶಿಯವರು RIನ ಮಂಡಲಿ ಮತ್ತು ಅಧ್ಯಕ್ಷರಿಗೆ ಅಧೀನರಾಗಿರುವವರಾದರೂ RIನ ಕೇಂದ್ರ ಕಛೇರಿಯಲ್ಲಿರುವ ಸುಮಾರು 700 ಕಾರ್ಯಕರ್ತರಿಗೆ ಮತ್ತು 7 ಅಂತರಾಷ್ಟ್ರೀಯ ಕಛೇರಿಗಳಿಗೆ ನಿರ್ವಹಣಾ ಮಾರ್ಗದರ್ಶನವನ್ನು ನೀಡುತ್ತಾರೆ. ಮಹಾ ಕಾರ್ಯದರ್ಶಿಗಳು RIನ ಮಂಡಲಿಯ ಕಾರ್ಯದರ್ಶಿಗಳಲ್ಲದೆ ಧರ್ಮದರ್ಶಿಗಳ ಉಸ್ತುವಾರಿಯಲ್ಲಿರುವ ರೋಟರಿ ಫೌಂಡೇಶನಿನ ಮುಖ್ಯ ಆಡಳಿತಾಧಿಕಾರಿಗಳೂ ಹೌದು. ಅವರು ಎಲ್ಲಾ ರೋಟರಿ ಸಮಿತಿಗಳಿಗೆ, ಶಾಸನ ರಚನಾ ಸಮಿತಿಗೆ, ಪ್ರಾದೇಶಿಕ ಸಮ್ಮೇಳನಗಳಿಗೆ ಮತ್ತು RIನ ವಾರ್ಷಿಕ ಅಧಿವೇಶನಗಳಿಗೂ ಕಾರ್ಯದರ್ಶಿಗಳಾಗಿರುತ್ತಾರೆ.

ಮಹಾಕಾರ್ಯದರ್ಶಿಯವರನ್ನು RI ಮಂಡಲಿ ಮೂರು ವರ್ಷಗಳಿಗೆ ಮೀರದ ಅವಧಿಗೆ ಆಯ್ಕೆ ಮಾಡುತ್ತದೆ. ಆದರೆ ಮಂಡಲಿಯು ಈ ಅವಧಿಯನ್ನು 5 ವರ್ಷಗಳಿಗೆ ವಿಸ್ತರಿಸಬಹುದು. 1910ರಿಂದ 11 ಜನ ಮಾತ್ರ ಈ ಹುದ್ದೆಯಲ್ಲಿ ಸೇವೆ ಸಲ್ಲಿಸಿರುತ್ತಾರೆ. ಮೊದಲ ಕಾರ್ಯದರ್ಶಿಯಾಗಿ ರೋಟರಿಯ ಸ್ಥಾಪಕ ಸದಸ್ಯ ಪೆರ್ರಿ ಚೆಸ್ಲೆ (ಇವರ ರೋಟರಿ ಇಂಟರ್‌ನ್ಯಾಶನಲ್‌ನ ಮಹಾಕಾರ್ಯದರ್ಶಿಗಳಾಗಿ ಸತತ 32 ವರ್ಷಗಳ ಸೇವೆಯನ್ನು ಪರಿಗಣಿಸಿ, RI ಇವರಿಗೆ Secretary Emirates ಎನ್ನುವ ಅಪೂರ್ವ ಬಿರುದನ್ನು ಕೂಡಾ ನೀಡಿದೆ.) ಯವರು 1910–1942ರವರೆಗೆ ಸೇವೆ ಸಲ್ಲಿಸಿದರು. ಆನಂತರ ಬಂದವರು ಫಿಲ್ ಲವ್ ಜೋಯ್ (1942–52), ಜಾರ್ಜ್ ಮೀನ್ಸ್ (1953–72), ಹ್ಯಾರಿ ಸ್ಟೀವರ್ಟ್ (1972–78), ಹರ್ಬ್ ಫಿಗ್‌ಮನ್ (1979–86 ಮತ್ತು 1993–95), ಫಿಲಿಪ್ ಲಿಂಡ್ಸೆ (1986–90), ಸ್ಪೆನ್ಸರ್ ರಾಬಿನ್‌ಸನ್ ಜೂನಿಯರ್ (1990–93), ಜೆಪ್ರಿ ಲಾರ್ಜ್ (1995–97), ಎಸ್. ಆ್ಯರನ್ ಹೈಟ್ (1997–2000) ಮತ್ತು ಎಡ್ವಿನ್ ಫುಟ್ ಅವರನ್ನು 2000ದಲ್ಲಿ ನೇಮಕ ಮಾಡಲಾಯಿತು. ಪ್ರಸ್ತುತ ಮಹಾಕಾರ್ಯದರ್ಶಿಗಳಾಗಿ ಜಾನ್ ಹಾಕ್‌ರವರು ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ರೋಟರಿಯ ಇತಿಹಾಸದುದ್ದಕ್ಕೂ ರೋಟರಿಯಲ್ಲಿ ಮಹಾ ಕಾರ್ಯದರ್ಶಿಗಳ ವೈಯಕ್ತಿಕ ಪ್ರಭಾವ ಮತ್ತು ಆಡಳಿತಾತ್ಮಕ ಜಾಣ್ಮೆಗಳು ರೋಟರಿಯ ಕಾರ್ಯಕ್ರಮಗಳನ್ನು ಮತ್ತು ಚಟುವಟಿಕೆಗಳನ್ನು ಯಶಸ್ವಿಯಾಗಿ ರೂಪಿಸಿದೆ.

Rtn. Dr. S. N. Padiyar 1985-86 & 1986-87
Rtn. B. Arun Kumar Shetty 1987-88
Rtn. Dr. H. Rammohan 1988-89
Rtn. K. Shridhar Kamath 1989-90
Rtn. Dr. Anand Nayak 1990-91
Rtn. B. Ramachandra Prabhu 1991-92
Rtn. G. Santhosh Kumar Shetty 1992-93
Rtn. Dr. H. A. Vishweshwar 1993-94
Rtn. Dr. H. R. Hebbar 1994-95

Rtn. K. T. Surendranath 1995-96
Rtn. B. C. Somayaji 1997-98
Rtn. S. Subraya Halambi 1999-2000
Rtn. K. Seetharama Nackathaya 2001-02
Rtn. Dr. Umesh Puthran 2003-04
Rtn. A. Shantharam Pai 2005-06

## ಹುಟ್ಟುಹಬ್ಬದ ಶುಭಾಶಯಗಳು



ರೊ. ಡಾ. ಹೆಚ್. ರಾಮಮೋಹನ್
ದಿನಾಂಕ : ಫೆಬ್ರವರಿ 22
ಮೊಬೈಲ್ : 98441 34023



ರೊ. ನಂದಾ ನಾಯಕ್
ದಿನಾಂಕ : ಫೆಬ್ರವರಿ 24
ಮೊಬೈಲ್: 9341410244, 7619418877

## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ತಾ. 22–02–2026ನೇ
ಆದಿತ್ಯವಾರದಂದು
ತಮ್ಮ ವಿವಾಹ ವಾರ್ಷಿಕೋತ್ಸವವನ್ನು
ಆಚರಿಸಲಿರುವ
ರೊ. ಡಾ. ಪ್ರಿಯಾಂಕ ಜೋಗಿ ಮತ್ತು
ಡಾ. ಜಗದೀಶ ಜೋಗಿ
ಇವರಿಗೆ ಕ್ಲಬ್ಬಿನ ಎಲ್ಲಾ ಸದಸ್ಯರ ಪರವಾಗಿ
ಶುಭಾಶಯಗಳು.

ಮೊಬೈಲ್ : 9480004748

"Peace cannot be kept by force;
it can only be achieved by understanding."
—Albert Einstein

"Darkness cannot drive out darkness: only light can do that. Hate cannot drive out hate: only love can do that."
- Martin Luther King Jr.

## THE ROTARY 4-WAY TEST

1. Is it the truth?
2. Is it fair to all concerned?
3. Will it build goodwill and better friendships?
4. Will it be beneficial to all concerned?

*This Bulletin is sponsored by :*
Rtn. Regan Lobo
Mob. : 9901319947

For Private Circulation only

Email id – rotaryclub.kundapurasouth@gmail.com

Rtn. S. Sadananda Chatra 1996-97
Rtn. K. Suresh Kamath 1998-99
Rtn. S. Vijaya Shetty 2000-01
Rtn. U. S. Shenoy 2002-03
Rtn. Dr. B. V. Udupa 2004-05
Rtn. K. Shantharam Prabhu 2006-07

Rtn. T. Raghavendra Hatwar 2007-08
Rtn. K. Shankar 2008-09
Rtn. S. Jayakar Shetty 2009-10
Rtn. K. K. Kanchan 2010-11
Rtn. Abhinandan A. Shetty 2011-12
Rtn. Vivian Crasto 2012-13
Rtn. G. Shreedhar Shetty 2013-14
Rtn. K. P. Bhat 2014-15
Rtn. P. Vasudeva Karanth 2015-16

Rtn. Aouzline F. Rebello 2016-17
Rtn. J. Srinath Rao 2017-18
Rtn. Johnson D' Almeida 2018-19
Rtn.Devaraj 2019-20
Rtn. Dr. Uttam Kumar Shetty 2020-21
Rtn.Mahendr Shetty 2021-22
Rtn.Sathyanarayana Puranik 2022-23
Rtn.Suresh Mallya 2023-24
Rtn. Judith Mendonca 2024-25